**ಸಿ.ಸಿ. ನಂಬ್ರಃ 529/2017**
**CW-1**

ದಿನಾಂಕಃ 24.11.2023

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎ ಯು ಎಸ್ ರವರಿಂದಃ**

ನಾನು ಸಿದ್ಧಾಪುರದ ಗಜಾನನ ಪ್ಯಾಕ್ಟರಿಯಲ್ಲಿ ಬೆಳಿಗ್ಗೆ 8.30 ರಿಂದ ಸಂಜೆ 6 ಗಂಟೆಯವರೆಗೆ ಕೆಲಸ ಮಾಡುತ್ತಿದ್ದೆನು. ನನ್ನ ಮನೆಯು ಮೊದಲು ಕೋಟೇಶ್ವರದಲ್ಲಿತ್ತು, ಮನೆಗೆ 8 ಗಂಟೆಗೆ ಹೋಗುತ್ತಿದ್ದೆನು. ನನ್ನ ಬಳಿ ಬೈಕ್ ಇತ್ತು. ದಿನಾಂಕ 10.12.2016 ರಂದು ನಾನು ಪ್ಯಾಕ್ಟರಿಗೆ ಹೋಗಿರುತ್ತೇನೆ. ಅಪಘಾತದ ವಿಚಾರ ತಿಳಿಸಿದ ಮೇಲೆ ನಾನು ವಾಪಾಸ್ಸು ಬಂದಿರುತ್ತೇನೆ. ನಾನು ಬರುವಷ್ಟರಲ್ಲಿ ಅಪಘಾತ ಆಗಿತ್ತು. ಮೃತ ವ್ಯಕ್ತಿ ನನಗೆ ಮಾವ ಆಗಿದ್ದು, ಅವರಿಗೆ ಹೆಂಡತಿ ಮತ್ತು ಮಕ್ಕಳು ಯಾರೂ ಇಲ್ಲದೇ ನನ್ನ ಜೊತೆ ವಾಸವಾಗಿದ್ದ ಕಾರಣ ನಾನು ದೂರು ನೀಡಿರುತ್ತೇನೆ ಎಂದರೆ ಸರಿ. ಅಪಘಾತದ ಬಗ್ಗೆ ಬೇರೆಯವರು ಹೇಳಿರುವುದನ್ನು ಕೇಳಿ ಮೃತ ವ್ಯಕ್ತಿ ನನ್ನ ಮಾವನಾದ ಕಾರಣ ದೂರು ನೀಡಿರುತ್ತೇನೆ ಎಂದರೆ ಸರಿ.

ಅಪಘಾತವನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಹಜರ್ ಸಮಯದಲ್ಲಿ ಸ್ಥಳವನ್ನು ತೋರಿಸಿರುತ್ತೇನೆ, ಅದರಲ್ಲಿ ಎನು ಬರೆದಿದ್ದಾರೆ ಎಂದು ಗೊತ್ತಿಲ್ಲ, ಒಂದು ಸಹಿ ಹಾಕಲು ಹೇಳಿದ ಮೇರೆಗೆ ಮಾಡಿರುತ್ತೇನೆ. ಅಪಘಾತಕ್ಕೆ ಸಂಬಂಧಿಸಿದ ವಾಹನವನ್ನು ನೋಡಿಲ್ಲ, ಅಪಘಾತಪಡಿಸಿದ ವ್ಯಕ್ತಿಯ ಬಗ್ಗೆ ನೆನಪಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನ್ಯಾಯಾಲಯಕ್ಕೆ ಬಂದ ನಂತರ ನೋಡಿರುತ್ತೇನೆ ಎಂದರೆ ಸರಿ. ಆರೋಪಿಗೂ ಮತ್ತು ಈ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವನವರ ವಿಮೆ ಹಣದ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಪೊಲೀಸರಿಗೆ ಎಷ್ಟು ಸಹಿ ನೀಡಿರುತ್ತೇನೆ ಎಂದು ನೆನಪಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ